# ರಂಗನಾಯಕ ಸ್ವಾಮಿ ರಾಜೀವಲೋಚನ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 169.
2. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 281.
3. **Note:** This song is not available in the books of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** Singer has followed these lyrics except one additional word marked in yellow highlights.

ರಾಗ: ಮೋಹನ ತಾಳ: ಅಟ

ರಂಗನಾಯಕ ಸ್ವಾಮಿ ರಾಜೀವಲೋಚನ
ರಮಣನೆ ಬೆಳಗಾಯಿತೇಳೆನ್ನುತ ॥ ಪ ॥

ಅಂಗನೆ ಲಕುಮಿ ತಾ ಪತಿಯನೆಬ್ಬಿಸಿದಳು
ಶೃಂಗಾರದ ನಿದ್ರೆ ಸಾಕೆನ್ನುತ ॥ ಅಪ ॥

ಪಕ್ಷಿ ರಾಜನು ಬಂದು ಬಾಗಿಲೊಳಗೆ ನಿಂದು
ಅಕ್ಷಿ ತೆರೆದು ಬೇಗ ಈಕ್ಷಿಸೆಂದು
ಪಕ್ಷಿ ಜಾತಿಗಳೆಲ್ಲ ಚಿಲಿಪಿಲಿಗುಟ್ಟುತ
ಸೂಕ್ಷ್ಮದಲಿ ನಿನ್ನನು ಸ್ಮರಿಸುವುವೊ ಕೃಷ್ಣ ॥ ೧ ॥

ಸನಕ ಸನಂದನ ಸನತ್ಸುಜಾತರು ಬಂದು
ವಿನಯದಿ ಕೈ ಮುಗಿದು ಒಲ್ಯೆಪರು
ಘನ ಶುಕ ಶೌನಕ ವ್ಯಾಸ ವಾಲ್ಮೀಕರು
ನೆನೆದು ಕೊಂಡಾಡುವರೊ ಹರಿಯೇ ॥ ೨ ॥

ಸುರರು ಕಿನ್ನರರು ಕಿಂಪುರುಷರು ಉರಗರು
ಪರಿಪರಿಯಲಿ ನಿನ್ನ ಸ್ಮರಿಸುವರು
ಅರುಣನು ಬಂದು ಉದಯಾಚಲದಲಿ ನಿಂದು
ಕಿರಣ ತೋರುವನು ಭಾಸ್ಕರನು ಶ್ರೀಹರಿಯೇ ॥ ೩ ॥

ಪದುಮನಾಭನೆ ನಿನ್ನ ನಾಮಾಮೃತವನು
ಪದುಮಾಕ್ಷಿಯರು ತಮ್ಮ ಮನೆಯೊಳಗೆ
ಉದಯದೊಳೆದ್ದು ಸವಿದಾಡುತ ಪಾಡುತ
ದಧಿಯ ಕಡೆವರೇಳು ಮಧುಸೂಧನ ಕೃಷ್ಣ ॥ ೪ ॥

ಮುರಮಥನನೆ ನಿನ್ನ ಚರಣದ ಸೇವೆಯ
ಕರುಣಿಸಬೇಕೆಂದು ತರುಣಿಯರು
ಪರಿಪರಿಯಿಂದಲಿ ಸ್ಮರಿಸಿ ಹಾರೈಪರು
ಪುರಂದರ ವಿಠಲ ನೀನೇಳೋ ಶ್ರೀ ಹರಿಯೇ ॥ ೫ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಲಕ್ಷ್ಮೀದೇವಿಯು ತನ್ನ ಪತಿಯಾದ ನಾರಾಯಣನನ್ನು ಎಚ್ಚರಿಸುತ್ತಾಳೆ.

೧. **ಅಕ್ಷಿ** = ಕಣ್ಣು

**ಈಕ್ಷಿಸು** = ನೋಡು, ದೃಷ್ಟಿ ಬೀರು

೨. **ಶೌನಕ** = ಶುನಕ ಮತ್ತು ಪ್ರಮದ್ವರೆ ಇವರ ಮಗ. ಈತನು ನೈಮಿಷಾರಣ್ಯದಲ್ಲಿಯ ಕುಲಪತಿ. ಸೂತಪುರಾಣಿಕನಿಂದ ಇತಿಹಾಸ ಪುರಾಣಗಳನ್ನು ಕೇಳಿದ ಮಹರ್ಷಿಗಳಲ್ಲಿ ಇವನು ಪ್ರಮುಖನು. (ಭಾರತ, ಆದಿ ೫)

೩. **ಕಿಂಪುರುಷ** = ದೇವತೆಗಳಲ್ಲಿಯ ಒಂದು ಪಂಗಡ. ಇವರಿಗೆ ಮನುಷ್ಯನ ಮೋರೆ, ಕುದುರೆಯ ದೇಹ ಇರುತ್ತದೆ. (ಭಾರತ, ಆದಿ ೬೬)

**ಉರಗ** = ನಾಗರು. ಇವರು ಪಾತಾಳ ಲೋಕದವರು

**ಅರುಣ** = ಸೂರ್ಯನ ಸಾರಥಿ.  ಇವನು ವಿನತೆಯ ಮಗ, ಗರುಡನ ಅಣ್ಣ.  ತನ್ನ ಸವತಿಯು ಮಕ್ಕಳನ್ನು ಹಡೆದರೂ ತನಗೆ ಮಕ್ಕಳಾಗಲಿಲ್ಲವೆಂಬ ಸಿಟ್ಟಿನಿಂದ ವಿನತೆ ತನ್ನ ಬಸಿರನ್ನು ಹಿಚುಕಿಕೊಂಡಳು.  ಅದರಿಂದ ಬೆಳವಣಿಗೆ ಪೂರ್ಣವಾಗದೆ ಕಾಲುಗಳಿಲ್ಲದ ಮಗ ಹುಟ್ಟಿದ. ಇವನೇ ಅರುಣ.  'ಆನೂರು' ಎಂದೂ ಇವನಿಗೆ ಹೆಸರಿದೆ.

೪. **ಸವಿದು** = ರುಚಿನೋಡಿ (ನಾಮಸ್ಮರಣೆ ಮಾಡಿ)

**ದಧಿ** = ಮೊಸರು

೫. **ಮುರ** = ನರಕಾಸುರನ ಪರಿವಾರದಲ್ಲಿದ್ದ ಒಬ್ಬ ರಾಕ್ಷಸ.

**Classification:** Keerthane
**Ankita:** purandara vittala
**Location:** NA
**Category:** Pooja Tatva, udaya rAga,
**Sub-Category:** ranga, Lakshmi, pati, udaya, beligge, nidde, pakshi, garuda, bagilu, kannu, Krishna, Narayana, sanaka, kai, vyasa, Valmiki, sura, kinnara, aruna, surya, amruta, mane, madhu, asura, karuna, gopi,
**Pravachana:** NA
**Explanation:** Dr. Vijayendra Desai, Dharwad